ಇನ್ನೊಂದು ಪರಿಸರಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯ ಮತ್ತು ಪರಸ್ಪರ ವ್ಯಕ್ತಿಗಳೊಂದಿಗಿನ ಬದ್ಧತೆಯುಳ್ಳ ಕಾರ್ಯವು ವೃತ್ತಿ ಜೀವನದ ಪ್ರಗತಿಯನ್ನು ಹೆಚ್ಚಿಸುತ್ತದೆ.

**ನಿರ್ಧಾರ ಕೈಗೊಳ್ಳುವ ಮತ್ತು ಸಮಸ್ಯೆ ಪರಿಹಾರ ಸಾಮರ್ಥ್ಯ:** ಇಂದಿನ ವೃತ್ತಿಯಲ್ಲಿ ನಿರ್ಣಯ ಕೈಗೊಳ್ಳುವ ಹಾಗೂ ಸಮಸ್ಯೆ ಪರಿಹರಿಸುವ ಕೌಶಲ್ಯ ಹೆಚ್ಚು ಬೇಡಿಕೆಯಲ್ಲಿದೆ. ಸಂಕೀರ್ಣ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಪರಿಶೀಲಿಸಿ ಮೌಲ್ಯಯುತವಾದ ಪರಿಹಾರ ಜಾರಿಗೆ ತರುವ ಸಾಮರ್ಥ್ಯ ಎಲ್ಲರಿಗಿಂತ ನಿಮ್ಮನ್ನು ಭಿನ್ನವಾಗಿಸುತ್ತದೆ. ನಿರ್ಣಯವನ್ನು ತರ್ಕಬದ್ಧವಾದ ಚಿಂತನೆಗಳೊಂದಿಗೆ ಮಂಡಿಸುವ ಕಲೆ ಎಲ್ಲರಲ್ಲಿ ಇರುವುದಿಲ್ಲ. ಅದನ್ನು ನಿಮ್ಮದಾಗಿಸಿಕೊಳ್ಳಿ.

**ಯೋಜನೆ, ಸಂಘಟನೆ ಮತ್ತು ಆದ್ಯತೆಯ ಸಾಮರ್ಥ್ಯ:** ಸರಳವಾಗಿ ಹೇಳುವುದಾದರೆ ಯಾರು ತಮ್ಮ ಕೆಲಸವನ್ನು ಯೋಜನೆಯಂತೆ ಸಂಘಟಿಸಿ ಪೂರೈಸುತ್ತಾರೋ ಆ ವ್ಯಕ್ತಿಯ ಮೌಲ್ಯ ಹೆಚ್ಚಿನದಾಗಿರುತ್ತದೆ. ನಿಮ್ಮ ಕೆಲಸವನ್ನು ಯೋಜಿಸಲು ವಿಶೇಷ ಗಮನ ನೀಡಿ ಮತ್ತು ನಿಮಗೆ ನೀಡಲಾದ ನಿಗದಿತ ಸಮಯದಲ್ಲಿ ಪೂರೈಸುವಿಕೆಯನ್ನು ಖಚಿತಪಡಿಸಿಕೊಳ್ಳಿ. ಅಂತೆಯೇ



ಚಿತ್ರ: ತಾಜುದ್ದೀನ್ ಆಝಾದ್

ಆದ್ಯತೆಗೆ ಅನುಗುಣವಾಗಿ ಕೆಲಸ ನಿರ್ವಹಿಸುವ ಕೌಶಲ್ಯ ಗಳಿಸಿಕೊಳ್ಳಿ. ನಿಮಗೆ ಸಿಗುವ ಆಯ್ಕೆಗಳನ್ನು ನೀವು ಹೇಗೆ ಬಳಸಿಕೊಳ್ಳುತ್ತೀರೆನ್ನುವಲ್ಲಿ ನಿಮ್ಮ ಜಾಣ್ಮೆ ಅಡಗಿದೆ. ನಿಮ್ಮ ಪ್ರತಿದಿನದ ಆಯ್ಕೆಗಳು ನಿಮ್ಮ ಭವಿಷ್ಯವನ್ನು ರೂಪಿಸುತ್ತವೆ.

**ನಾಯಕತ್ವ/ನಿರ್ವಹಣೆಯ ಕೌಶಲ್ಯ:** ಜನರನ್ನು ನಿರ್ವಹಿಸುವ ಸಾಮರ್ಥ್ಯ ಅತ್ಯಂತ ಬಲಶಾಲಿಯಾದದ್ದು. ನೀವು ಜನರಿಗೆ ಹೇಗೆ ಸ್ಫೂರ್ತಿ ತುಂಬುತ್ತೀರಿ? ಅವರಿಗೆ ಹೇಗೆ ಮಾರ್ಗದರ್ಶನ ನೀಡುತ್ತೀರಿ? ಎಂಬ ಪ್ರಗತಿಯ ಪ್ರತೀ ಹಂತವನ್ನು ಗಮನಿಸಲಾಗುತ್ತದೆ. ಆದ್ದರಿಂದ ನಿರ್ವಹಣೆಯ ಕೌಶಲ್ಯ ಅತ್ಯಂತ ಮಹತ್ವದ್ದು. ಒಂದು ತಂಡವನ್ನು ಮುನ್ನಡೆಸುವುದು ಮತ್ತು ಪ್ರಗತಿಗೆ ಅಡ್ಡಿಯಾದ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಬಗೆಹರಿಸುವುದು ಅಪೇಕ್ಷಣೀಯ. ಕಾರ್ಯ ಕ್ಷೇತ್ರದಲ್ಲಿ ಉತ್ತಮ ನಾಯಕತ್ವದ ಗುಣಗಳನ್ನು ಪ್ರದರ್ಶಿಸುವುದು ಇಂದಿನ ಅಗತ್ಯವಾಗಿದೆ.

**ವಿವರಗಳಿಗೆ ಗಮನ:** ಸಣ್ಣ ಚಿತ್ರಗಳಿಗಿಂತ ದೊಡ್ಡ ಚಿತ್ರ ಹೆಚ್ಚು ಮಹತ್ವದ್ದು ಎಂದು ಎಲ್ಲರೂ ಭಾವಿಸುತ್ತಾರೆ. ಆದರೆ ಬಹುತೇಕ ಕಂಪನಿಗಳು ಸಣ್ಣ ಚಿತ್ರವನ್ನು ಹೆಚ್ಚು ಅಪೇಕ್ಷಿಸುತ್ತವೆ. ಆ ಮೂಲಕ ಉದ್ಯೋಗಿಗಳ ಸೂಕ್ಷ್ಮ ಗಮನಿಸುವಿಕೆಯನ್ನು ಅಳೆಯುತ್ತವೆ. ಆದ್ದರಿಂದ ಪ್ರತೀ ಸೂಕ್ಷ್ಮ ಗಮನಿಸುವಿಕೆಯೂ ಮಹತ್ವದ್ದು. ಇದನ್ನು ಪ್ರತೀ ಉದ್ಯೋಗಾಕಾಂಕ್ಷಿ ಬೆಳಸಿಕೊಳ್ಳಬೇಕು.

**ಸಾರ್ವಜನಿಕ ಮಾತುಗಾರಿಕೆ:** ವ್ಯವಹಾರ ಸ್ಥಳದಲ್ಲಿ ಹರಳು ಹುರಿದಂತೆ ಮಾತನಾಡುವ ಕೌಶಲ್ಯವನ್ನು ಎಲ್ಲರೂ ಇಷ್ಟಪಡುತ್ತಾರೆ. ಜನಸಮೂಹದ ಮುಂದೆ ನಿಂತು ಚತುರೋಕ್ತಿಯಿಂದ ಮಾತನಾಡಿ ಪ್ರೇಕ್ಷಕರನ್ನು ಮೂಕಪ್ರೇಕ್ಷಕರನ್ನಾಗಿ ಮಾಡುವ ಕಲೆ ಬೆಳೆಸಿಕೊಳ್ಳಿ. ಸಾರ್ವಜನಿಕ ಮಾತುಗಾರಿಕೆ ಬಹಳ ನಿರ್ಣಾಯಕ ಕೌಶಲ್ಯವಾಗಿದೆ. ವಿಶ್ಲೇಷಣಾತ್ಮಕ ಅಂಶಗಳಿಂದ ಶ್ರೋತೃಗಳಲ್ಲಿ ಆತ್ಮವಿಶ್ವಾಸ ತುಂಬುವಂತೆ ಮಾಡುವ ಅಗತ್ಯವಿದೆ. ಇದು ಉದ್ಯೋಗದಾತರ ಬೇಡಿಕೆಯ ಕೌಶಲ್ಯವಾಗಿದೆ. ಮಾತುಗಾರಿಕೆ ನೈಸರ್ಗಿಕವಾದುದು. ಆದರೂ ಕೆಲವೊಂದು ಅಭ್ಯಾಸಗಳಿಂದ ಇದನ್ನು ಸ್ವಾಧೀನಪಡಿಸಿಕೊಳ್ಳಬಹುದು.

**ನೀತಿಶಾಸ್ತ್ರ ಮತ್ತು ಸಮಗ್ರತೆ:** ಸಮಗ್ರತೆ ಮತ್ತು ಸುಸ್ಥಾಪಿತ ನೈತಿಕ ಮೌಲ್ಯಗಳು ಕೆಲಸದ ಸ್ಥಳದಲ್ಲಿ ನಿಮ್ಮ ಗೌರವವನ್ನು ಹೆಚ್ಚಿಸುತ್ತವೆ. ಪ್ರಾಮಾಣಿಕತೆ, ಹಗರಣಗಳು ಇಲ್ಲದಂತೆ ಕಾಪಾಡಿ ನಿಮ್ಮನ್ನು ವೃತ್ತಿಯಲ್ಲಿ ಉನ್ನತಕ್ಕೆ ಕೊಂಡೊಯ್ಯುತ್ತದೆ.

**ವಿಮರ್ಶೆಯಿಂದ ಕಲಿಕೆ ಮತ್ತು ಸ್ವೀಕರಣ:** ವಯಸ್ಸು ಮತ್ತು ಅನುಭವದ ಹೊರತಾಗಿ ಪ್ರತಿಯೊಬ್ಬರೂ ಕೆಲಸದ ಸ್ಥಳದಲ್ಲಿ ನಿರಂತರವಾಗಿ ಕಲಿಯುತ್ತಿರುತ್ತಾರೆ. ಇದಕ್ಕಾಗಿ ವಿಮರ್ಶೆಯಿಂದಲೂ ಕಲಿಯುವ ಸ್ವೀಕರಣ ಗುಣ ಹೊಂದಿರಬೇಕು, ವಿಮರ್ಶೆಯನ್ನು ಮಾಹಿತಿಯನ್ನಾಗಿಸುವ ಕೌಶಲ್ಯ ಹೊಂದಿರಬೇಕು. ಉದ್ಯೋಗದ ಸ್ವರೂಪಗಳು ನಿರಂತರವಾಗಿ ಬದಲಾಗುತ್ತಿರುತ್ತವೆ. ಆದ್ದರಿಂದ ಕಲಿಕೆಯ ಸ್ವರೂಪವೂ ಭಿನ್ನವಾಗಿರುತ್ತದೆ. ಅದು ತರಬೇತಿ, ಅನುಭವ ಅಥವಾ ವಿಮರ್ಶೆಯೂ ಆಗಿರಬಹುದು. ಪ್ರತಿಯೊಂದು ತಪ್ಪು ಕೂಡಾ ಕಲಿಕೆಯ ನೈಜ ಮೂಲ. ಅವು ತಿಳುವಳಿಕೆ ಮತ್ತು ಜಾಗೃತಿ ಉಂಟು ಮಾಡಿ ಅಮೂಲ್ಯ ಅನುಭವ ನೀಡುತ್ತವೆ. ವೈಫಲ್ಯಗಳು ನಮಗೆ ದೊರೆತ ಕಲಿಕೆಯ ಅಭಿವೃದ್ಧಿ ಪಾಠಗಳು.

**ಮಾರಾಟ ಮತ್ತು ಮಾರುಕಟ್ಟೆ:** ಉತ್ಪನ್ನ ಮತ್ತು ಸೇವೆಗಳನ್ನು ಉತ್ತೇಜಿಸುವ, ಪ್ರಸ್ತುತಪಡಿಸುವ ಮತ್ತು ಮಾರಾಟ ಮಾಡುವ ತತ್ವಗಳು ಮತ್ತು ವಿಧಾನಗಳನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ಕಂಪನಿಯಲ್ಲಿ ನಿಮ್ಮ ಪಾತ್ರ ಯಾವುದೇ ಆಗಿರಲಿ, ಯಾವುದೇ ಸಮಯದಲ್ಲಿ ನೀವು ಭೇಟಿ ಮಾಡುವ ಜನರಿಗೆ ಕಂಪನಿ ಮತ್ತು ಅದರ ಉತ್ಪನ್ನ/ಸೇವೆಗಳನ್ನು ಉತ್ತೇಜಿಸಬೇಕಾಗುತ್ತದೆ. ಔಪಚಾರಿಕ ಮತ್ತು ಅನೌಪಚಾರಿಕ ವಾತಾವರಣದಲ್ಲಿಯೂ ಕಂಪನಿಯನ್ನು ಉತ್ತೇಜಿಸುವ ಕೌಶಲ್ಯ ಮತ್ತು ಮಾರಾಟದ ವ್ಯಾಪ್ತಿಯ ಜ್ಞಾನ ಅಗತ್ಯ.

**ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಕೌಶಲ್ಯ:** ಬಹುತೇಕ ಇಂದು ಎಲ್ಲಾ ಉದ್ಯೋಗಗಳು ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಬಗೆಗಿನ ಮೂಲಭೂತ ತಿಳುವಳಿಕೆಯನ್ನು ಬಯಸುತ್ತವೆ. ದೈನಂದಿನ ಕಾರ್ಯ ಸುಗಮ ಹಾಗೂ ವೇಗಗೊಳಿಸಲು ತಂತ್ರಜ್ಞಾನದ ಅವಲಂಬನೆ ಹೆಚ್ಚಾಗಿದೆ. ಸಂವಹನ ಮಾಡುವ, ಬರೆಯುವ, ರಚನೆ ಮಾಡುವ ಹಾಗೂ ಅದನ್ನು ಪ್ರಸ್ತುತ ಪಡಿಸುವ ಎಲ್ಲಾ ಕೆಲಸಗಳಿಗೆ ಕಂಪ್ಯೂಟರ್ ಜ್ಞಾನದ ಅಗತ್ಯವಿದೆ. ಅದಕ್ಕಾಗಿ ವಿದ್ಯುನ್ಮಾನ ಮಂಡಲಗಳು ಹಾಗೂ ಕಂಪ್ಯೂಟರ್ ಭಾಗಗಳ ಜ್ಞಾನ ಇರುವುದು ಅಪೇಕ್ಷಣೀಯ.